ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗರಸ್ತೆ, ಬೆಂಗಳೂರು –560 001.

ಸಂಖ್ಯೆ: ಇ-ಆಡಳಿತ ಬೋಸೇಮಾ 01 / 2017-18 ದಿನಾಂಕ:05-11-.2018

**ಪ್ರಮುಖವಾದದ್ದು**

**ಸುತ್ತೋಲೆ**

ವಿಷಯ: **Non-Teaching Staff Data software** ನಲ್ಲಿ ಅಳವಡಿಸಿರುವ ಇಲಾಖೆಯ ಬೋದಕೇತರ ಸಿಬ್ಬಂದಿಗಳು ಅಧಿಕಾರಿಗಳ ಸೇವಾ ಮಾಹಿತಿಯನ್ನು ಸೇವಾ ಪುಸ್ತಕದೊಂದಿಗೆ ಪರಿಶೀಲಿಸಿಕೊಂಡು ಇಂದೀಕರಿಸುವ **(Update)** ಬಗ್ಗೆ.

ಉಲ್ಲೇಖ: ಈ ಕಛೇರಿಯ ಜ್ಞಾಪನ ಸಂಖ್ಯೆ: ಸಿ5(1) ಬೋನೌಮಾ-49/2016-17 ದಿನಾಂಕ: 07.03.2017.

ಉಲ್ಲೇಖಿತ ಈ ಕಛೇರಿಯ ಜ್ಞಾಪನದಲ್ಲಿ, ಈ ಕಛೇರಿಯಿಂದ ನಿಮ್ಮ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಬೋದಕೇತರ ಸಿಬ್ಬಂದಿಗಳು ಹಾಗೂ ಅಧಿಕಾರಿಗಳ ಸೇವಾ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿತ್ತು.

ಈ ಸಂಬಂದ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋದಕೇತರ ಸಿಬ್ಬಂದಿಗಳು ಹಾಗೂ ಅಧಿಕಾರಿಗಳ ಸೇವಾ ಮಾಹಿತಿಯನ್ನು ನಿರ್ವಹಣೆ ಮಾಡುವ ಸಲುವಾಗಿ **Non-Teaching Staff Data software** ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ. ಸದರಿ ತಂತ್ರಾಂಶದಲ್ಲಿ ಈ ಕಛೇರಿಯ ಹಂತದಲ್ಲಿ ಜಿಲ್ಲೆಗಳಿಂದ ಭರ್ತಿಮಾಡಿ ಕಳುಹಿಸಿದ್ದ ಬೋದಕೇತರ ಸಿಬ್ಬಂದಿಗಳು ಹಾಗೂ ಅಧಿಕಾರಿಗಳ ಸೇವಾ ಮಾಹಿತಿಯನ್ನು ಅಳವಡಿಸಲಾಗಿದೆ.

**Non-Teaching Staff Data software** ನಲ್ಲಿ ಈಗಾಗಲೇ ಅಳವಡಿಸಿರುವ ನಿಮ್ಮ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋದಕೇತರ ಸಿಬ್ಬಂದಿಗಳ/ಅಧಿಕಾರಿಗಳ ಸೇವಾ ಮಾಹಿತಿಯನ್ನು ಕಡ್ಡಾಯವಾಗಿ **ಸಂಪೂರ್ಣವಾಗಿ ಪರಿಶೀಲಿಸಿ ಇಂದಿಕರಿಸಲು (Update)** ಹಾಗೂ ಸದರಿ ತಂತ್ರಾಂಶದಲ್ಲಿ ಈವರೆವಿಗೂ ಸೇವಾ ಮಾಹಿತಿಯನ್ನು **ಅಳವಡಿಸದೇ ಇರುವ** ಬೋಧಕೇತರ ನೌಕರರ ಸೇವಾ ಮಾಹಿತಿಯನ್ನು ಅಳವಡಿಸಲು ಅವಕಾಶ ಕಲ್ಪಿಸಲಾಗಿದೆ. ಮುಂದುವರೆದಂತೆ, ನಿಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ತೆಗೆದುಕೊಳ್ಳಬೇಕಾದ ಕ್ರಮಕೈಗೊಳ್ಳಲು ಈ ಮೂಲಕ ತಿಳಿಸಿದೆ. ಸದರಿ ತಂತ್ರಾಂಶವನ್ನು ಇಲಾಖಾ ವೆಬ್‌ಸೈಟ್ www.schooleducation.kar.nic.in ನಲ್ಲಿನ ಮುಖಪುಟದ ಬಲಗಡೆಯಲ್ಲಿ **ಬೋಧಕೇತರ ಸಿಬ್ಬಂದಿ ಸೇವಾ ಮಾಹಿತಿ** ಲಿಂಕ್ ಅನ್ನು ನೀಡಲಾಗಿದೆ ಮತ್ತು ಸದರಿ ಲಿಂಕ್ ಅನ್ನು ಕ್ಲಿಕ್ ಮಾಡಿದ ನಂತರ ಕಾಣಸಿಗುವ ಪುಟದಲ್ಲಿ ಬೋದಕೇತರ ಸಿಬ್ಬಂದಿಗಳು ಹಾಗೂ ಅಧಿಕಾರಿಗಳ ಸೇವಾ ಮಾಹಿತಿಯ ತಂತ್ರಾಂಶ ಬಳಕೆದಾರರ ಕೈಪಿಡಿಯನ್ನು **(Non-Teaching Staff Data software User Manual)** ಅಳವಡಿಸಲಾಗಿದ್ದು, ಡೌನ್‌ಲೋಡ್ ಮಾಡಿಕೊಂಡು ಮುಂದಿನ ಕ್ರಮವಹಿಸುವುದು.

ಜಿಲ್ಲಾ ಉಪನಿರ್ದೇಶಕರು ನಿಮ್ಮ ವ್ಯಾಪ್ತಿಯಲ್ಲಿ ಬರುವ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳು, ಶಾಲೆಗಳಲ್ಲಿ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇಲಾಖೆಯ ಎಲ್ಲಾ ವೃಂದದ ಬೋದಕೇತರ ಸಿಬ್ಬಂದಿಗಳು ಹಾಗೂ ಅಧಿಕಾರಿಗಳ ಸೇವಾ ಮಾಹಿತಿಯನ್ನು ಕಡ್ಡಾಯವಾಗಿ ಪಡೆದು ತಂತ್ರಾಂಶದಲ್ಲಿ ಅಳವಡಿಸಲು/ ಇಂದೀಕರಿಸಲು **(Update)** ತಿಳಿಸಿದೆ. ACPIGULBARGA, ACPIDHARWAD, SISLEP, TBF,CTEs, DSERT,

KSEEB, RMSA/SSA, CPI, MDM, DIETs, DDPIs ಮತ್ತು KTBS ಈ ಎಲ್ಲಾ ಕಛೇರಿಗಳಿಗೆ ಪ್ರತ್ಯೇಕವಾದ ಲಾಗಿನ್‌ಗಳನ್ನು ನೀಡಲಾಗಿದೆ. ಈ ರೀತಿಯಲ್ಲಿ ಸೇವಾ ಮಾಹಿತಿಯನ್ನು ಅಳವಡಿಸಲು ಮೇಲುಸ್ತುವಾರಿ ನೋಡಿಕೊಳ್ಳುವ ಸಂಪೂರ್ಣ ಜವಾಬ್ದಾರಿಯನ್ನು ಆಯಾ ಕಛೇರಿಯ ಪತ್ರಾಂಕಿತ ಸಹಾಯಕರು/ ಪತ್ರಾಂಕಿತ ವ್ಯವಸ್ಥಾಪಕರು ಇವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ ದಿನಾಂಕ 30-11-2018 ರ ಒಳಗಾಗಿ ಅಳವಡಿಸಲು/ ಇಂದೀಕರಿಸಲು **(Update)** ತಿಳಿಸಿದೆ.

ಆದ್ದರಿಂದ ನಿಗದಿತ ಅವಧಿಯಲ್ಲಿ ನಿಮ್ಮ ಕಛೇರಿಯ ಹಾಗೂ ಜಿಲ್ಲೆ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಬೋಧಕೇತರ ಸಿಬ್ಬಂದಿ ಮತ್ತು ಅಧಿಕಾರಿಗಳ ಸೇವಾ ಮಾಹಿತಿಗಳನ್ನು ತಪ್ಪದೇ **Non-Teaching Staff Data software** ತಂತ್ರಾಂಶದಲ್ಲಿ ಅಳವಡಿಸಲು ಕ್ರಮವಹಿಸಲು ಸೂಚಿಸಲಾಗಿದೆ.

**ಅಪರ ನಿರ್ದೇಶಕರು (ಆಡಳಿತ)**

**ಪ್ರತಿಯನ್ನು**

1. ಅಪರ ಆಯುಕ್ತರು, ಧಾರವಾಡ ಮತ್ತು ಗುಲ್ಬರ್ಗಾ, ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
2. ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
3. ನಿರ್ದೇಶಕರು ಡಿ.ಎಸ್.ಇ.ಆರ್.ಟಿ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
4. ನಿರ್ದೇಶಕರು, ಸಿ.ಟಿ.ಇ. ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
5. ನಿರ್ದೇಶಕರು, ಮೈನಾರಿಟಿ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
6. ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
7. ನಿರ್ದೇಶಕರು, ಪಠ್ಯ ಪುಸ್ತಕ ಬೆಂಗಳೂರು ಇವರಿಗೆ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
8. ನಿರ್ದೇಶಕರು, ಸಿಸಿಲಿಪ್, ಧಾರವಾಡ ಇವರಿಗೆ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
9. ವಿಭಾಗೀಯ ಸಹ ನಿರ್ದೇಶಕರು, ಮೈಸೂರು ವಿಭಾಗ, ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
10. ವಿಭಾಗೀಯ ಸಹ ನಿರ್ದೇಶಕರು, ಬೆಳಗಾಂ ವಿಭಾಗ, ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
11. ಸಹ ನಿರ್ದೇಶಕರು, ಮಧ್ಯಾಹ್ನ ಉಪಾಹಾರ ಯೋಜನೆ, ಬೆಂಗಳೂರು ಇವರಿಗೆ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
12. ಪ್ರಾಂಶುಪಾಲರು, ರಾಜ್ಯದ ಎಲ್ಲಾ ಸಿ ಟಿ ಇಗಳು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
13. ಉಪನಿರ್ದೇಶಕರು, ಟಿಬಿಎಫ್, ಬೆಂಗಳೂರು ಇವರಿಗೆ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
14. ಉಪನಿರ್ದೇಶಕರು (ಆಡಳಿತ) ಬೆಂಗಳೂರು ಮತ್ತು ಮೈಸೂರು ವಿಭಾಗ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
15. ಉಪನಿರ್ದೇಶಕರು (ಅಭಿವೃದ್ಧಿ) ಬೆಂಗಳೂರು ಮತ್ತು ಮೈಸೂರು ವಿಭಾಗ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
16. ಕ್ಷೇತ್ರ ಶಿಕ್ಷಣಾಧಿಕಾರಿಗಳು ಬೆಂಗಳೂರು ಮತ್ತು ಮೈಸೂರು ವಿಭಾಗ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ (ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳ ಸೇವಾ ಮಾಹಿತಿಯನ್ನು ಅಳವಡಿಸಲು ಕ್ರಮವಹಿಸುವುದು.)
17. ಕಛೇರಿ ಪ್ರತಿ.